**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 284/2017** ಸಿ.ಡಬ್ಲ್ಯೂ -49

ಪಿ.ಡಬ್ಲ್ಯೂ -14

ಹೆಸರು ಃ ಉದ್ದಂಡಪ್ಪ

ತಂದೆಃಗಂಡ ಃ ಜ್ಯೋತಿಬಾನು

ವಯಸ್ಸು ಃ 56 ವರ್ಷ

ಉದ್ಯೋಗ ಃ ಪಿ.ಎಸ.ಐ

ವಾಸಸ್ಥಳ ಃ ಕೊಂಚಾವರಂ ದಿನಾಂಕಃ16.01.2024

ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ದಿ.15.12.2019 ರಿಂದ 24.09.2021 ರವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪಿ.ಎಸ.ಐ. ಆಗಿ ಕಾರ್ಯ ನಿರ್ವಹಿಸಿದ್ದೇನೆ.

ದಿ.19.07.2016 ರಂದು ನಾನು ನಿಂಬರ್ಗಾ ಪೋಲಿಸ ಠಾಣೆಯ ಪಿಎಸಐ ಎಂದು ಕಾರ್ಯ ನಿರ್ವಹಿಸುತ್ತಿದ್ದು ಚಾಸಾ-51 ರವರು ಸಿಪಿಐ ಎಂದು ಕಾರ್ಯ ನರ್ವಹಿಸುತ್ತಿದ್ದರು. ಚಾಸಾ-51 ರವರು ಕರೆ ಮಾಡಿ ಒಂದು ಅಪಘಾತದಲ್ಲಿ 7-8 ಜನ ತೀರಿಕೊಂಡಿದ್ದು ನನಗೆ ಸರ್ಕಾರಿ ಆಸ್ಪತ್ರೆಗೆ ಬರಲು ತಿಳಿಸಿದರು. ನಾನು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಎರಡು ಶವಗಳ ಶವಪಂಚನಾಮೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತೇನೆ.

ಸೂಜಾಬಾಯಿ ಗಂಡ ಪಂಢರಿರವರ ಶವಪಂಚನಾಮೆಗೆ ಚಾಸಾ-7, 8 ರವರು ಶವ ಪಂಚರು ಇದ್ದು ಇವರ ಸಮಕ್ಷಮ ಸಂಜೆ 4.00 ರಿಂದ 5.15 ರ ವರೆಗೆ ಶವ ಪಂಚನಾಮೆ ಮಾಡಿರುತ್ತೇನೆ.

ಕಾಂತಾಬಾಯಿ ಗಂಡ ಶಿವಾಜಿ ರವರ ಶವಪಂಚನಾಮೆಗೆ ಚಾಸಾ-8, 9 ರವರು ಶವ ಪಂಚರು ಇದ್ದು ಇವರ ಸಮಕ್ಷಮ ಸಂಜೆ 5.30 ರಿಂದ 6.30 ರ ವರೆಗೆ ಶವ ಪಂಚನಾಮೆ ಮಾಡಿರುತ್ತೇನೆ.

ಸಾಕ್ಷಿಗೆ ಈಗ ನಿಪಿ-7 ತೋರಿಸಿ ಅದರಲ್ಲಿ ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿಪಿ-7 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ನಿಪಿ-8 ತೋರಿಸಿ ಅದರಲ್ಲಿ ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿಪಿ-8 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಸೂಜಾಬಾಯಿಯವರು ಶವ ಪರಿಕ್ಷೆಗೆ ಸಲ್ಲಿಸಿದ ವರದಿಯನ್ನು ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ವರದಿಯನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಕಾಂತಾಬಾಯಿಯವರು ಶವ ಪರಿಕ್ಷೆಗೆ ಸಲ್ಲಿಸಿದ ವರದಿಯನ್ನು ತೋರಿಸಿ ಅದರಲ್ಲಿರುವ

ಸಹಿ ಗುರುತಿಸಿದ್ದು ವರದಿಯನ್ನು ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

**ಪಾ. ಸವಾಲುಃ- ಆರೋಪಿತರ ಪರ ಆರ್.ಜೆ.ಪಿ. ವಕೀಲರಿಂದಃ**

ಸರ್ಕಾರಿ ಆಸ್ಪತ್ರೆಯಿಂದ ನನಗೆ ಎಂಎಲಸಿ ವರದಿ ಬಂದಿರಲಿಲ್ಲ. ಚಾಸಾ-51 ರವರು ನನಗೆ 1.30 ರಿಂದ 2.30 ರ ಒಳಗೆ ಕರೆ ಮಾಡಿದ್ದರು. ನಾನು ಅಸ್ಪತ್ರೆಗೆ ತಲುಪಿದಾಗ 3.00 ರಿಂದ 3.30 ಆಗಿತ್ತು. ನಾನು ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ, ಯಾವುದೇ ಶವ ಪಂಚನಾಮೆ ಮಾಡಿರುವುದಿಲ್ಲಚ, ಚಾಸಾ-51 ರವರ ಮಾತು ಕೇಳಿ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರ ಪರಿವಾರಕ್ಕೆ ಸಹಾಯಧನ ಸಿಗಬೇಕು ಎಂದು ಎಲ್ಲ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೋ.ಪ. ಸಲ್ಲಿಸಿದ ಕಾರಣ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಜೆ.ಎಂ.ಎಫ.ಸಿ ಆಳಂದ